ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 903

2. ಸದಸ್ಯರ ಹೆಸರು : ಪ್ರಕಾಶ್ ಕೆ.ರಾಥೋಡ್

3. ಉತ್ತರಿಸಲು ನಿಗದಿಯಾಗಿದ್ದ ದಿನಾಂಕ : 24.02.2022

4. ಉತ್ತರಿಸುವ ಸಚಿವರು : ಜಲಸಂಪನ್ಮೂಲಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರಗಳು
ಅ)	ರಾಜ್ಯದಲ್ಲಿ ನದಿ ಜೋಡಣೆ ಮಾಡಲು ಯಾವ ಯಾವ ನದಿಗಳನ್ನು ಆಯ್ಕೆ ಮಾಡಲಾಗಿದೆ;	ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ(NWDA) ವತಿಯಿಂದ ರಾಜ್ಯದಲ್ಲಿನ ಈ ಕೆಳಗಿನ ನದಿ ಜೋಡಣೆಗಳನ್ನು ರೂಪಿಸಲಾಗುತ್ತಿದೆ; (i) ಬೇಡ್ತಿ – ವರದಾ ನದಿ ಜೋಡಣೆ (ii) ನೇತ್ರಾವತಿ - ಹೇಮಾವತಿ ನದಿ ಜೋಡಣೆ
ಆ)	ಈ ನದಿಗಳ ಜೋಡಣೆಯಿಂದ ರಾಜ್ಯಕ್ಕೆ ಎಷ್ಟು ಪಾಲು ನೀರು ಲಭ್ಯವಾಗುತ್ತದೆ;(ವಿವರ ಒದಗಿಸುವುದು)	**ಬೇಡ್ತಿ - ವರದಾ ನದಿ ಜೋಡಣೆ** ಬೇಡ್ತಿ-ವರದಾ ನದಿ ಜೋಡಣೆಯ ಕರಡು ವಿವರವಾದ ಯೋಜನಾ ವರದಿಯು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯಿಂದ ರಾಜ್ಯದ ಅಭಿಪ್ರಾಯಕ್ಕಾಗಿ ಸ್ವೀಕೃತವಾಗಿದ್ದು, ಸದರಿ ಯೋಜನೆಯಡಿ 18.50 ಟಿಎಂಸಿ ನೀರನ್ನು ತಿರುಗಿಸಲು ಪ್ರಸ್ತಾಪಿಸಲಾಗಿದೆ. ಯೋಜನಾ ವರದಿಯು ಪರಿಶೀಲನೆಯಲ್ಲಿದೆ. ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು ಪರ್ಯಾಯಗಳೊಂದಿಗೆ ಪ್ರಸ್ತಾಪಿಸಿದ ತಿರುವುಗೊಳಿಸಲು ಅಂದಾಜು ಮಾಡಿರುವ 21.27 ಟಿಎಂಸಿ ನೀರಿನ ಪ್ರಮಾಣವನ್ನು ಹೀರೇವಡ್ಡಟ್ಟಿ ಬಳಿ ನೀರನ್ನು ಶೇಖರಣೆ ಮಾಡಲು, ವಿಸ್ತೃತ ಯೋಜನೆಯನ್ನು National Perspective Plan ಅಡಿಯಲ್ಲಿ ವಿವರವಾದ ಯೋಜನಾ ವರದಿ ಸಿದ್ಧಪಡಿಸಲು ರಾಜ್ಯ ಸರ್ಕಾರವು ದಿನಾಂಕ:21.01.2021ರ ಪತ್ರದಲ್ಲಿ ಸಹಮತಿಯನ್ನು NWDA ಗೆ ತಿಳಿಸಿದ್ದು, ವರದಿಯನ್ನು NWDA ಇಂದ ನಿರೀಕ್ಷಿಸಲಾಗಿದೆ. **ನೇತ್ರಾವತಿ - ಹೇಮಾವತಿ ನದಿ ಜೋಡಣೆ** ನೇತ್ರಾವತಿ - ಹೇಮಾವತಿ ನದಿ ಜೋಡಣೆಯಡಿ 6.64 ಟಿಎಂಸಿ ಪ್ರಮಾಣವನ್ನು ತಿರುಗಿಸಲು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು ಯೋಜಿಸಿತ್ತು. ನೇತ್ರಾವತಿ-ಹೇಮಾವತಿ ನದಿ ಜೋಡಣೆಗೆ ಗುರುತಿಸಲಾಗಿದ್ದ ಜಲಾನಯನ ಪ್ರದೇಶವು ಹಾಲಿ ನಿರ್ಮಾಣವಾಗುತ್ತಿರುವ ಎತ್ತಿನಹೊಳೆ ಯೋಜನೆಯ ಜಲಾನಯನ ಪ್ರದೇಶದಲ್ಲೇ ಬರುವುದರಿಂದ ಕರ್ನಾಟಕ ರಾಜ್ಯದ ಕೋರಿಕೆಯ ಮೇರೆಗೆ ನೇತ್ರಾವತಿ - ಹೇಮಾವತಿ ನದಿ ಜೋಡಣೆ ಯೋಜನೆಯನ್ನು ಕೈಬಿಡಲು N.W.D.A. ಸಂಸ್ಥೆಯು ನಿರ್ಧರಿಸಿದೆ. ಬೇಡ್ತಿ-ಅಘನಾಶಿನಿ-ವರದಾ ನದಿ ಜೋಡಣೆ ಯೋಜನೆಯು ರಾಜ್ಯದಲ್ಲಿನ (Intra-State) ನದಿಜೋಡಣೆಯಾಗಿದ್ದು, ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ ಪರಿಶೀಲನೆಯಲ್ಲಿದೆ.
ಇ)	ನದಿ ಜೋಡಣೆಯಿಂದ ರಾಜ್ಯಕ್ಕೆ ಆಗುವ ಲಾಭಕ್ಕಿಂತ ನಷ್ಟವೇ ಜಾಸ್ತಿಯಾಗುವುದರಿಂದ ಈ ಬಗ್ಗೆ ಸರ್ಕಾರದ ಕ್ರಮಗಳೇನು?(ವಿವರ ನೀಡುವುದು).	ರಾಜ್ಯದಲ್ಲಿನ ನದಿ ಜೋಡಣೆ ಯೋಜನೆಗಳ ವಿವರವಾದ ಯೋಜನಾ ವರದಿಗಳು ಸಿದ್ಧವಾದ ನಂತರ ಲಭ್ಯವಾಗುವ ನೀರಿನ ಪ್ರಮಾಣವನ್ನು ಬಳಸಿಕೊಳ್ಳಲು, ಎಲ್ಲಾ ಸಾಧಕ-ಬಾಧಕಗಳ ಕುರಿತು ಕೂಲಂಕಷವಾಗಿ ಅಧ್ಯಯನ ಕೈಗೊಂಡು, ಸಕ್ಷಮ ಪ್ರಾಧಿಕಾರಗಳ ತೀರುವಳಿ/ ಅನುಮೋದನೆಗಳೊಂದಿಗೆ ಹಾಗೂ ಅಗತ್ಯವಿರುವ ಆರ್ಥಿಕ ನೆರವು/ನಿಧಿಯೊಂದಿಗೆ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ

ಸಂಖ್ಯೆ: ಜಸಂಇ 09 ಕೃವಿಇ 2022

(ಗೋವಿಂದಎಂ. ಕಾರಜೋಳ)
ಜಲಸಂಪನ್ಮೂಲಸಚಿವರು